



# ಸುರಲೋಕದ ಸುಂದರ ಹಕ್ಕಿ!

ಚಿತ್ರ ಬರಹ:
**ಮಂಜುನಾಥ, ಡಿ.ಎಸ್.**

**ಈ** ಸುಂದರ ಪುಷ್ಪದ ಹೆಸರು 'ಬರ್ಡ್ ಆಫ್ ಪ್ಯಾರಡೈಸ್'. ಕ್ರೇನ್ ಫ್ಲವರ್ ಎಂದೂ ಕರೆಯುತ್ತಾರೆ. ಹರ್ಬೇಸಿಯಸ್ ಪೆರೆನಿಯಲ್ ಗುಂಪಿಗೆ ಸೇರಿದ ಸ್ಟ್ರೆಲಿಟ್ಜಿಯೋಯೆ ಸಂಕುಲದ ಸಸ್ಯವಿದು. ಉಷ್ಣವಲಯದ ಹಕ್ಕಿಗಳನ್ನು ಹೋಲುವ ಹೂಗಳಿಂದ ಕಂಗೊಳಿಸುವ ಈ ಸಸ್ಯ ತೇವಾಂಶದಿಂದ ಕೂಡಿದ ಭೂಮಿ, ಮಿತವಾದ ಗಾಳಿ, ಹಾಗೂ ಬಿಸಿಲಿನ ವಾತಾವರಣದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಬಾಳೆ, ಶುಂಠಿ ಇತ್ಯಾದಿ ಸಸ್ಯಗಳೂ ಈ ಸಸ್ಯಜಾತಿಗೇ ಸೇರುತ್ತವೆ.

ನಿಧಾನವಾಗಿ ಬೆಳೆಯುವ ಇದು ಹೂ ಬಿಡಲು ನಾಲ್ಕರಿಂದ ಐದು ವರ್ಷ ತೆಗೆದುಕೊಳ್ಳುತ್ತದೆ. ನಿತ್ಯಹರಿದ್ವರ್ಣದ ಎಲೆಗಳಿಂದ ಕೂಡಿದ, ದಕ್ಷಿಣ ಆಫ್ರಿಕಾ ಮೂಲದ ಈ ಸಸ್ಯ ನಿಗದಿತ ಋತುವಿನಲ್ಲಿ ಹೂಗಳನ್ನು ಬಿಡುತ್ತದೆ. ಇದರ ಕಾಂಡ ಐದಾರು ಅಡಿಗಳಷ್ಟು ಎತ್ತರವಿದ್ದು, ಹೂವು– ಕಾಂಡಗಳ ನಡುವಣ ವ್ಯವಸ್ಥಿತ ಹಾಗೂ ಸುಂದರ ವಿನ್ಯಾಸದಿಂದಾಗಿ ಅತ್ಯಂತ ಆಕರ್ಷಣೀಯವಾಗಿ ಕಂಡುಬರುತ್ತದೆ.

1773ರಲ್ಲಿ ಸರ್ ಜೋಸೆಫ್ ಬ್ಯಾಂಕ್ಸ್ ಈ ಸಸ್ಯವನ್ನು ಬ್ರಿಟನ್‌ಗೆ ಪರಿಚಯಿಸಿದರು. ಮನಮೋಹಕ ಮತ್ತು ಚಿತ್ತಾಕರ್ಷಕ ಹೂಗಳನ್ನು ನೀಡುವ ಈ ಸಸ್ಯಕ್ಕೆ ಜಾರ್ಜ್–3 ದೊರೆಯ ಮಡದಿ ರಾಣಿ ಚಾರ್ಲೊಟೆ ಗೌರವಾರ್ಥ ಸ್ಟ್ರೆಲಿಟ್ಜಿಯ ಎಂದು ನಾಮಕರಣ ಮಾಡಿದರು.

ಸುಮಾರು ಒಂದು ವಾರ ಕಾಲ ಬಾಡದೆ ಇರುವ ಈ ಮನೋಹರ ಪುಷ್ಪವನ್ನು ವಿಶೇಷವಾಗಿ ಅಲಂಕಾರಿಕ ಪುಷ್ಪ ಜೋಡಣೆಗಳಲ್ಲಿ ಬಳಸಲಾಗುತ್ತದೆ.

ಫಲವತ್ತಾದ ಮಣ್ಣು, ಯಥೇಚ್ಛವಾದ ನೀರಿನ ಸೌಕರ್ಯ ಇದ್ದಲ್ಲಿ ಈ ಸಸ್ಯವನ್ನು ದೊಡ್ಡ ಕುಂಡಗಳಲ್ಲಿಯೂ ಬೆಳೆಯಬಹುದು.